ದಿನಾಂಕಃ 05-01-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ **3** ರಿಂದ **5** ಪರ ಶ್ರೀ ಕೆ ಎಂ ಜೆ ವಕೀಲರಿಂದಃ-

ನಮ್ಮ ತಂದೆ ಗೋಸಣ್ಣ ತೀರಿಕೊಂಡಿದ್ದಾರೆ. ದಿಃ17/6/2022 ರಂದು ತೀರಿಕೊಂಡಿದ್ದಾರೆ. ಅವರಿಗೆ ಒಂದು ಗಂಡು ಮಗು, 3 ಜನ ಹೆಣ್ಣು ಮಕ್ಕಳು. ದಾವಾಆಸ್ತಿ ಮೂಲತಃ ನಮ್ಮ ಕುಟುಂಬಕ್ಕೆ ಸೇರಿದ್ದಾಗಿದೆ. ನಾವು ಕೆ ಎಸ್ ರಾಮಪ್ಪ ಎಂಬುವವರಿದ ಖರೀದಿ ಮಾಡಲಾಗಿದೆ. ಅದು ಮೊದಲು 7 ಎಕರೆ 29 ಗುಂಟೆ ಇತ್ತು ಎಂದರೆ ಸರಿ. ಕೆ ಎಸ್ ರಾಮಪ್ಪ ನವರು ಮೊದಲು ನನ್ನ ತಂದೆ ಗೋಸಣ್ಣ, ನನ್ನ ತಂದೆಯ ಚಿಕ್ಕಪ್ಪ ಸಿದ್ದಪ್ಪನವರಿಂದ ಖರೀದಿ ಮಾಡಿದ್ದರು. ಸದರಿ ಖರೀದಿ ಪತ್ರದ ಆಧಾರದ ಮೇಲೆ ರಾಮಪ್ಪ ನವರ ಹೆಸರಿಗೆ ಖಾತೆ ಬದಲಾಗಿತ್ತು ಎಂದರೆ ಸರಿ. 1979 ರಲ್ಲಿ ನಾವು 1 ಎಕರೆ ಜಮೀನು ಖರೀದಿ ಮಾಡಿದ್ದೆವು. 2 ನೇ ಪ್ರತಿವಾದಿ ಅದೇ ಸರ್ವೆ ನಂಬರಿನಲ್ಲಿ 4 ಎಕರೆ 39 ಗುಂಟೆ ಜಮೀನನ್ನು ರಾಮಪ್ಪನವರಿಂದ ಖರೀದಿ ಮಾಡಿದ್ದಾರೆಂದರೆ ಸರಿ. ನಮ್ಮ ತಂದೆ ಖರೀದಿ ಮಾಡಿದ 1 ಎಕರೆ ಜಮೀನು ಹಾಗೂ ಪ್ರತಿವಾದಿ 2 ರವರು ಖರೀದಿ ಮಾಡಿದ 4 ಎಕರೆ 39 ಗುಂಟೆ ಜಮೀನಿನ ಕ್ರಯಪತ್ರಗಳು ಒಂದೇ ದಿನ ಆಗಿವೆ ಎಂದರೆ ಸರಿ. ಖಾತೆ ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿ. ನಾವು ಇದುವರೆಗೂ ನಮ್ಮ ತದೆ ಖರೀದಿ ಮಾಡಿದ 1 ಎಕರೆ ಜಮೀನಿನ ಬಗ್ಗೆ ಖಾತೆ ಮಾಡಿಸಿಕೊಂಡಿಲ್ಲ ಎಂದರೆ ಸರಿ. ಸದರಿ 1 ಎಕರೆ ಜಮೀನಿನಲ್ಲಿ ಸ್ವಾದೀನತೆಯಲ್ಲೂ ಸಹ ಇಲ್ಲ ಎಂದರೆ ಸರಿಯಲ್ಲ. ನಮ್ಮ ಸ್ವಾದೀನತೆ ಬಗ್ಗೆ ದಾಖಲೆ ಕೊಟ್ಟಿದ್ದೇವೆ.

3 ನೇ ಪ್ರತಿ ವಾದಿಯ ತಂದೆ ಹನಮುಪ್ಪನವರೂ ಕೂ 1986 ರಿದ ರಾಮಪ್ಪನವರಿಂದ 2 ಎಕರೆ 28 ಗುಟೆಯನ್ನು ಅಂದೇ ಸರ್ವೆ ನಂಬರಿನಲ್ಲಿ ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಅದೇ ಪ್ರಕಾರ ಪ್ರತಿವಾದಿ 3 ರಿಂದ 5 ರವರು ಅವರು ಖರೀದಿ ಮಾಡಿದ ಜಮೀನಿನ ಸ್ವಾದೀನತೆಯಲ್ಲಿ ಇದಾದರೆಂದರೆ ಸರಿಯಲ್ಲ. ಸಾಕ್ಷಿ 1 ಎಕರೆ 28 ಗುಂಟೆ ಜವಿಳೀನಿನ ಸ್ವಾದೀನತೆಯಲ್ಲಿ ಇದ್ದಾರೆನ್ನುತ್ತಾರೆ. ಅವರ ಹೆಸರಿನಲ್ಲಿ 2 ಎಕರೆ 28 ಗುಂಟೆ ಖಾತೆ ಇದೆ ಎಂದರೆ ಸಾಕ್ಷಿ ಅದರಲ್ಲಿ 1 ಎಕರೆ ನಮಗೆ ಖಾತ ಬರಬೇಕೆನ್ನುತ್ತಾರೆ. ನಮ್ಮ ಜಮೀನು ಎಷ್ಟು ಭೂ ಸ್ವಾದೀನತೆಗೆ ಹೋಗಿದೆ ಎಂಬ ಬಗ್ಗೆ

ಅಳತೆ ಮಾಡಿಸಿಲ್ಲ. ಗೋವಿಂದಪ್ಪ ನವರು ಅಳತೆ ಮಾಡಿಸಿದ್ದಾರೆಂದರೆ ಸಾಕ್ಷಿ ನಮಗೆ ಹೇಳದ ಹಾಗೆ ಅಳತೆ ಮಾಡಿಸಿದ್ದಾರೆನ್ನುತ್ತಾರೆ. ಗೋವಿದಪ್ಪನವರಿಗೆ ಸೇರಿದ 1 ಎಕರೆ 3 ಗುಂಟೆ ಜಮೀನು ಭೂ ಸ್ವಾದೀನತೆಗೆ ಹೋಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರ ಜಮೀನಿನಲ್ಲಿ ಎಷ್ಟು ಭೂ ಸ್ವಾದೀನಗೊಂಡಿದೆ ಅಂತ ಗೊತ್ತಿಲ್ಲ. ನಾವು ಸುಳ್ಳು ಕ್ರಯಪತ್ರ ಮಾಡಿಸಿಕೊಡ್ಡಿದ್ದೇವೆಂದರೆ ಸರಿಯಲ್ಲ ನಾವು ಸ್ವಾದೀನತೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ ಜಮೀನು ಭೂ ಸ್ವಾದೀನತಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಮಾಡಿದ್ದೇನೆಂದರೆ ಸರಿಯಲ್ಲ. ಆ ಕಾರಣ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.